ದಿನಾಂಕ 19.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಎದುರುದಾರರ ಪರ ವಕೀಲರಿಂದಃ-**

ನಾನು 1999 ನೇ ಇಸವಿಯಲ್ಲಿ ಚಿಕ್ಕಮಂಗಳೂರಿನ ಬಾಲನೂರು ಕಾಫಿ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು 2020 ನೇ ಇಸವಿಯಲ್ಲಿ ವಿಭಾಗ ಕೋರಿ ಅಸಲು ದಾವಾ ಸಂಖ್ಯೆ 23/2020 ನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ನಾನು ಈ ಅರ್ಜಿಯನ್ನು ದಾಖಲಿಸಿದ ಬಳಿಕ 1 ನೇ ಎದುರುದಾರರು ಪೊನ್ನಂಪೇಟೆಯ ಕಿರಿಯ ಶ್ರೇಣಿ ನ್ಯಾಯಾಲಯದಲ್ಲ ಅಸಲುದಾವಾ ಸಂಖ್ಯೆ 07/2019 ನ್ನು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು 9 ರಿಂದ 11 ನೇ ಎದುರುದಾರರ ವಿರುದ್ದ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ 07/2019 ನ್ನು ದಾಖಲಿಸಿದ ಬಳಿಕ ನಾವು 9 ರಿಂದ 11 ನೇ ಎದುರುದಾರರ ಸ್ವತ್ತಿಗೆ ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಬಗ್ಗೆ 9 ರಿಂದ 11 ನೇ ಎದುರುದಾರರು ನಮ್ಮ ವಿರುದ್ದ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು 1999 ರಿಂದ 2010 ರ ವರೆಗೆ ಚಿಕ್ಕಮಂಗಳೂರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 09.01.2004 ರಂದು ನಾವು ಮಾರಾಟ ಮಾಡಿದ

ಆಸ್ತಿಯನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಮೂರು ಕುಟುಂಬದ ಒಡಂಬಡಿಕೆ ಪತ್ರಗಳನ್ನು ನಾನು ಮತ್ತು ನನ್ನ ಸಹೋದರರು ಮಾಡಿಕೊಂಡಿರುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ನನ್ನ ಸಹೋದರರು ದಿನಾಂಕ **09.10.2015** ಮತ್ತು **04.02.2017** ರಂದು ಒಡಂಬಡಿಕೆ ಪತ್ರಗಳನ್ನು ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

**9** ರಿಂದ **11** ನೇ ಎದುರುದಾರರು ನನ್ನ ಮತ್ತು ನನ್ನ ಸಹೋದರರ ನಡುವೆ ಅಸಲು ದಾವಾ ಸಂಖ್ಯೆ **64/2018** ಮತ್ತು **65/2018** ನ್ನು ಘೋಷಣಾತ್ಮಕ ಪರಿಹಾರ ಕೋರಿ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ **09.01.2004** ರಂದು ಮಾರಾಟ ಮಾಡಿದ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ **66/1999** ರ ಬಗ್ಗೆ ನನಗೆ **1999** ನೇ ಇಸವಿಯಲ್ಲಿಯೇ ತಿಳುವಳಿಕೆ ಇದ್ದು, **2015** ರಿಂದ ನಾನು ಮತ್ತು ನನ್ನ ಸಹೋದರರು **9** ರಿಂದ **11** ನೇ ಎದುರುದಾರರಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಅವರುಗಳ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಹೂಡಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ದಾಖಲಿಸಿದ ಬಳಿಕ ಪುನಃ ಅವರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ವಿಭಾಗ ಕೋರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

9 ರಿಂದ 11ನೇ ಎದುರುದಾರರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.